ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆಯ

## ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ಪ್ರಾಯೋಜಿತ: ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ

# ನಾವೇಕೆ ಮೀನುಕೃಷಿ ಮಾಡಬೇಕು ?

ಏಕೆಂದರೆ,



✸ ನಮಗೆ ಹೆಚ್ಚುವರಿ ಆದಾಯ ಬೇಕು. ನಾವೋ ಬಹಳ ಮಂದಿ. ಜಮೀನೋ ಇರುವಷ್ಟೆ ಇದೆ. ಜೊತೆಗೆ ಉತ್ತಮ ಆಹಾರ ಪ್ರತಿನಿತ್ಯ ಎಲ್ಲರಿಗೂ ಬೇಕು. ಇರುವ ತುಂಡು ಭೂಮಿಯಲ್ಲೇ ನೆಮ್ಮದಿಯ ಬದುಕು ಎಲ್ಲರಿಗೂ ಬೇಕು.



✸ ಭತ್ತ, ಮೆಕ್ಕೆಜೋಳ, ಕಬ್ಬು ಬೆಳೆಗಳಿಗೆ ಸವಾಲೊಡ್ಡುವ ಮೀನುಕೃಷಿಯಲ್ಲಿ ಆದಾಯವನ್ನು ನೆರೆರಾಜ್ಯದ ಆಂಧ್ರ ರೈತರು ಸಂಪಾದಿಸುತ್ತಿದ್ದಾರೆ.

✸ ಮಳೆಯ ನೀರಿದೆ ಮತ್ತು ಹೊಳೆಯ ನೀರಿದೆ. ಹೊಲದ ಕೊಳದಲ್ಲಿ ನೀರನ್ನು ಸಂಗ್ರಹಿಸಲು ಸಾಧ್ಯವಿದೆ.

✸ ಸರ್ಕಾರಿ ಮತ್ತು ಖಾಸಗಿ ಕೇಂದ್ರಗಳಲ್ಲಿ ಮೀನು ಮರಿಗಳು ಸಿಗುತ್ತವೆ. ಗೊಬ್ಬರ ಮತ್ತು ಮೇಲು ಆಹಾರ ನಮ್ಮಲ್ಲೆ ಇವೆ. ಇನ್ನು ತಡ ಮಾಡಬಾರದು.







✸ ಕೃಷಿ, ತರಕಾರಿ, ಹಣ್ಣು, ಹೂವು, ಸೊಪ್ಪು, ಗಿಡ, ಮರ, ಹೈನುಗಾರಿಕೆ, ಕೋಳಿ, ಆಡು–ಕುರಿ, ಹಂದಿ, ಬಾತುಕೋಳಿ, ಮೊಲ ಇತ್ಯಾದಿ ಉದ್ಯಮಗಳನ್ನು ಸಮಗ್ರವಾಗಿ ಮೀನುಕೃಷಿಯೊಂದಿಗೆ ಜೋಡಿಸಬಹುದು.

✶ ಮೀನುಕೃಷಿಯನ್ನು ಎಲ್ಲಾ ಬಗೆಯ ರೈತರುಗಳು ಕೈಗೊಳ್ಳಬಹುದು. ಆಸಕ್ತಿ, ಪರಿಶ್ರಮ, ಕ್ರಮಬದ್ಧ ಯೋಜನೆ ಇವಿಷ್ಟು ಮೊದಲಿಗಿರಬೇಕು.

✶ ಜವಾಬ್ದಾರಿಯಿಂದ ಮೀನುಕೃಷಿ ಮಾಡಿದ ಪ್ರಪಂಚದ ಯಾವುದೇ ರೈತ ಬಡವನಾಗಿ ಉಳಿದಿಲ್ಲ.



ಜಲ ಕೃಷಿ
ಜನ ಖುಷಿ
ಬೇಡ ಖುದ್ಕುಶಿ
(ಆತ್ಮಹತ್ಯೆ)



ಒಂದು ಹೊಲ
ಒಂದು ಕೊಳ
ಒಬ್ಬ ರೈತ

ವಿನ್ಯಾಸ : ಸಂತೋಷ್ ಬಿ., ಪ್ರೋಗ್ರಾಂ ಅಸಿಸ್ಟೆಂಟ್ (ಕಂಪ್ಯೂಟರ್), ತರಳಬಾಳು ಕೆವಿಕೆ., ದಾವಣಗೆರೆ.

## ಮೀನು ಕೃಷಿಯಲ್ಲಿ ನಮ್ಮ ಕೇಂದ್ರದ ಚಟುವಟಿಕೆಗಳು






"ಮೀನು ಕೃಷಿ ನೀಲಿ ಕ್ರಾಂತಿ.
ನೆಲಕೃಷಿ ಬಿಡಬೇಕು ಭ್ರಾಂತಿ"
"ಹೆಚ್ಚಲಿ ಜಲಕೃಷಿಯಿಂದ ಭೂಕ್ರಾಂತಿ.
ನೆಲೆಸಲಿ ಬೇಗ ಆಹಾರ ಭದ್ರತೆಯ ಶಾಂತಿ"




- ನಮ್ಮ ಭೂಗ್ರಹದಲ್ಲಿ ನೀರು ಬೇಕಾದಷ್ಟಿದೆ. ಅಂತೆಯೇ ಸದಾ ಹೆಚ್ಚುತ್ತಿರುವ ಜನಸಂಖ್ಯೆಗೆ, ಜಲಕೃಷಿಯೇ ಪ್ರಮುಖ ಪರ್ಯಾಯ ಆಹಾರ ಉತ್ಪಾದನಾ ಕ್ಷೇತ್ರ.
- ಬಣ್ಣದ ಮೀನುಗಳ ವ್ಯಾಪಾರ ಕ್ಷೇತ್ರವೂ ಅತ್ಯಂತ ಉಪಯುಕ್ತ ಉದ್ಯಮ.
- ಜಮೀನಿರುವ ಪ್ರತಿ ರೈತ ಕುಟುಂಬವು, ಮಳೆ ನೀರಿನ ಹೊಂಡ ಮಾಡಿಕೊಳ್ಳಬೇಕು. ಅಂತರ್ಜಲ ಅಭಿವೃದ್ಧಿ ಜೊತೆಗೆ, ಪೌಷ್ಟಿಕ ಆಹಾರ ಮೀನನ್ನು ಮನೆಮಂದಿಗೆ ಬೆಳೆಯಬಹುದು. ಮೀನು ಕೃಷಿ ಬೆಳವಣಿಗೆಯ ಸಂಕೇತ.

**ಮತ್ತೇಕೆ ತಡ?**
**ಬನ್ನಿ! ಮೀನುಕೃಷಿ ಕೈಗೊಳ್ಳಿ!**
**ಬೊಗಸೆ ತುಂಬಾ ಹಣ ತಗೊಳ್ಳಿ!**

### "ಮತ್ಸ್ಯ ಕೃಷಿ ಕವನ"

ಮೀನಿದ್ದರೆ ಕೊಳದಲ್ಲಿ
ಹಣ ಇಟ್ಟಂಗೆ ಬ್ಯಾಂಕಲ್ಲಿ
ಸಂಪತ್ತಿದೆ ಸಾಗರದಡಿಯಲ್ಲಿ
ಕೆರೆ–ಕಟ್ಟೆ ಕೊಳದ ತಡಿಯಲ್ಲಿ
ಸಣ್ಣ ಮೀನುಮರಿ ಬಿಡಿ
ಮಾಡದೇ ಇರಿ ಗಡಿಬಿಡಿ
ಒಳ್ಳೆ ನೀರು ಆಹಾರ ಕೊಡಿ
ಹೆಂಗೆ ಬೆಳೆಯುತ್ತೆ ಮೀನು ನೋಡಿ
ಅದ್ಕೆ ಹೇಳೋದು ನಾವು
ಮೀನು ಕೃಷಿ ಮಾಡಿ ನೀವು
ಯಾಕಂದ್ರೆ ಗೊತ್ತಿಲ್ಲ
ಮೀನಿದ್ರೆ ಕೊಳದಲ್ಲಿ
ಹಣ ಇಟ್ಟಂಗೆ ಬ್ಯಾಂಕಲ್ಲಿ

**ತಂತ್ರಜ್ಞಾನ–ಅನುಭವ–ಪ್ರೋತ್ಸಾಹ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿದೆ.**



ಪ್ರಾಯೋಜಕರು : ನಿಕ್ರಾ ಯೋಜನೆ
ಮುದ್ರಣ : 2011
ಪ್ರತಿಗಳು : 2000



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಡಾ. ಟಿ.ಎನ್. ದೇವರಾಜ, ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ
ಕದಳೀವನ, ಎಲ್.ಐ.ಸಿ.ಕಾಲೋನಿ ಲೇಔಟ್, ಬಿ.ಐ.ಇ.ಟಿ. ರಸ್ತೆ, ದಾವಣಗೆರೆ – 577004
ದೂರವಾಣಿ : 08192–263462, ಫ್ಯಾಕ್ಸ್ : 08192–260969,
ಮಿಂಚಂಚೆ : dvgtkvk@yahoo.com, ವೆಬ್‌ಸೈಟ್ : www.taralabalukvk.com